**<u>ಮೆ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>**

C.C.No.1341/2019
CW9 /PW8

| | |
|---|---|
| ಹೆಸರು | ಮಂಜುನಾಥ ಕಡಹಳ್ಳಿ |
| ತಂದೆಯ ಹೆಸರು | ಮಲ್ಲಪ್ಪ |
| ವಯಸ್ಸು | 41 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ಹಾವೇರಿ. |

**ದಿನಾಂಕ: 28-10-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ:- ಎ.ಪಿ.ಪಿ ರವರಿಂದ.</u>**

ಆರೋಪಿ ನನ್ನ ಚಿಕ್ಕಮ್ಮನ ಮಗ. ಮೃತ ಷಣ್ಮುಕ ಸಹ ನನ್ನ ತಮ್ಮ. ಷಣ್ಮುಕಪ್ಪ ಇವನು ಈಗ ಸುಮಾರು 05 ವರ್ಷಗಳ ಹಿಂದೆ ಒಂದು ರಸ್ತೆಯ ಅಪಘಾತದಲ್ಲಿ ಆದ ಗಾಯದಿಂದ ತೀರಿಕೊಂಡಿರುತ್ತಾನೆ. ಸದರಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟೀ ಸವಾಲು- ಎ.ಪಿ.ಪಿ ರವರಿಂದ.</u>**

ದಿನಾಂಕ 17.08.2019 ರಂದು ಆರೋಪಿ ಮತ್ತು ಷಣ್ಮುಕ ಇವರು ಮುದೋಳಕ್ಕೆ ಹೋಗಿ ಬರುತ್ತೇವೆ ಅಂತಾ ಹೇಳಿ ಹೋಗಿದ್ದರು ಎಂದರೆ ಸರಿಯಲ್ಲ. ನಂತರ ರಾತ್ರಿ ಆರೋಪಿತನು ನನಗೆ ಪೋನ ಮಾಡಿ ನನಗೆ ಮತ್ತು ಷಣ್ಮುಕಪ್ಪನಿಗೆ ಮೋಟಾರ ಸೈಕಲ ಮೇಲಿಂದ ಬಿದ್ದು ಗಾಯಗಳು ಆಗಿ ಬಾಗಲಕೋಟದ ಕಟ್ಟಿ ಆಸ್ಪತ್ರೆಗೆ ದಾಖಲ ಮಾಡಿರುತ್ತಾರೆ ಅಂತಾ ಹೇಳಿದ ಮೇರೆಗೆ ನಾನು ಮತ್ತು ಇತರರು ಕೂಡಿಕೊಂಡು ಸದರಿ ಆಸ್ಪತ್ರೆಗೆ ಬೇಟಿ ಕೊಟ್ಟು ಷಣ್ಮುಕಪ್ಪನಿಗೆ ನೋಡಿದಾಗ ಅವನ ದೇಹಕ್ಕೆ ಭಾರಿ ಸ್ವರೂಪದ ಗಾಯಗಳು ಆಗಿ ಅವನು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಮತ್ತು ಆರೋಪಿತನಿಗೂ ಸಹ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ನಂತರ ಸದರಿ ಅಪಘಾತದ ಬಗ್ಗೆ ನಾನು ಆರೋಪಿತನಿಗೆ ವಿಚಾರಿಸಿದಾಗ ಆರೋಪಿತನು ದಿನಾಂಕ 17.08.2019 ರಂದು ರಾತ್ರಿ 9-15 ಗಂಟೆ ಸುಮಾರಿಗೆ ತಾನು ಚಲಾಯಿಸುತ್ತಿದ್ದ ಮೋಟಾರ ಸೈಕಲ ನಂ. ಕೆಎ-63 -ಇ-1128 ನೇದ್ದನ್ನು ಚಲಾಯಿಸಿಕೊಂಡು ಉಣಕಲ್ಲದಿಂದ ಮುದೋಳಕ್ಕೆ ಬರುತ್ತಿರುವಾಗ ಸದರಿ ಮೋಟಾರ ಸೈಕಲನ್ನು ನಾನು ಅತೀ ವೇಗವಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ಒಂದು ತೆಗ್ಗಿಗೆ ಹಾಯಿಸಿದ್ದರಿಂದ ಷಣ್ಮುಕಪ್ಪ ಮತ್ತು ನನಗೆ ಗಾಯಗಳು ಆದವು ಎಂದು ಹೇಳಿದನು ಎಂದರೆ ಸರಿಯಲ್ಲ. ದಿನಾಂಕ 05.09.2019 ರಂದು ಅಪಘಾತದಲ್ಲಿ ಗಾಯ ಹೊಂದಿದ ಷಣ್ಮುಕಪ್ಪ ಇವನು ಧಾರವಾಡದ ಶುಶಿತ್ರಾ ಆಸ್ಪತ್ರೆಯಲ್ಲಿ ಉಪಚಾರ ಫಲಿಸದ ಅಪಘಾತದಿಂದ ಆದ ಗಾಯದಿಂದ

ತೀರಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 06.09.2019 ಈಗ ನನಗೆ ಓದಿ ಹೇಳಿದ ಹಾಗೇ ಹೇಳಿಕೆಯನ್ನು ನೀಡಿರುತ್ತೇ‌ನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು. ನಿಪಿ-16 ರಲ್ಲಿ ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತನು ನನ್ನ ತಮ್ಮ ಆಗಿರುವುದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ -**</u> ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ